UASB LIBRARY
Newspaper Clippings
Pg .1 Thursday 12-08-2021 Jai Kisan



ಕೊರೊನಾ ಸಂಕಷ್ಟದಲ್ಲಿ ಕೈ ಹಿಡಿದ ನುಗ್ಗೆಪುಡಿ

• ಸಿ.ಎಸ್.ನಿರ್ವಾಣ ಸಿದ್ದಯ್ಯ





ಹೆಸರಘಟ್ಟ: ಕೊರೊನಾ ಸಂಕಷ್ಟದಲ್ಲಿ ಬೆಳೆದ ಬೆಳೆಗೆ ಮಾರುಕಟ್ಟೆ ಇಲ್ಲದೇ ರೈತರು ಬವಣೆಪಡುತ್ತಿರುವಾಗ ಬ್ಯಾತ ಗ್ರಾಮದ ರೈತ ಬಸವರಾಜು ಅವರು ನುಗ್ಗೆ ಮರಗಳನ್ನು ಬೆಳೆಸಿ ಸಂಕಷ್ಟವನ್ನು ದಿಟ್ಟವಾಗಿ ಎದುರಿಸಿದ್ದಾರೆ.

ಹಲ ಕೃಷಿ ಮೇಳದಲ್ಲಿ ಭಾಗವಹಿಸಿ ಕೃಷಿಯ ಬಗ್ಗೆ ತಿಳಿವಳಿಕೆ ಸಂಪಾದಿಸಿರುವ ಅವರು ತಮ್ಮ ಜಮೀನಿನಲ್ಲಿ ಸಾವಯವ ಕೃಷಿಯ ಮೂಲಕ ಲಾಭದಾಯಕ ಬೆಳೆ ತಮ್ಮದಾಗಿಸಿಕೊಂಡಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನು ಬಳಸದೇ ಜೀವಾಮೃತದ ಮೂಲಕ ಉತ್ತಮ ಫಸಲನ್ನು ಪಡೆದ ಹೆಗ್ಗಳಿಕೆ ಇವರದ್ದು.



'ದಾಕ್ಷಿ ಮತ್ತು ತೊಂಡೆ ಹಣ್ಣನ್ನು ಬೆಳೆದಿದ್ದೆ. ಎರಡು ಬೆಳೆಗಳಿಗೆ ಲಾಕ್‌ಡೌನ್ ಸಮಯದಲ್ಲಿ ಮಾರುಕಟ್ಟೆ ಸಿಗದೇ ತತ್ತರಿಸಿ ಹೋದೆ. ಒಂದೇ ಒಂದು ಕೆ.ಜಿ. ಮಾರಾಟವಾಗುತ್ತಿರಲಿಲ್ಲ. ಹಣ್ಣುಗಳು ಕೊಳೆತು ಹೋಗುತ್ತಿದ್ದವು. ಹಣ್ಣು ಹಾಳಾಗುವುದು ಬೇಡ ಎಂದು ರಸ್ತೆ ಬದಿಯಲ್ಲಿ ನಿಂತು ಉಚಿತವಾಗಿ ಹಂಚುತ್ತಿದ್ದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಕಷ್ಟವಾಗುತ್ತದೆ ಎಂದು ಪರ್ಯಾಯ ಮಾರ್ಗ ಹುಡುಕುತ್ತಿದ್ದೆ. ಆಗ ನೆರವಿಗೆ ಬಂದಿದ್ದೆ ನುಗ್ಗೆಪುಡಿಯ ಆಲೋಚನೆ' ಎನ್ನುತ್ತಾರೆ ಬಸವರಾಜು.

ಕೃಷಿಯಿಂದ ಯಾವ ರೈತನೂ ಹಾಳಾಗಲಾರ. ಕೃಷಿ ನಂಬಿ ಯಾರೂ ಕೆಡುವುದಿಲ್ಲ. ಆಧುನಿಕ ಜಗತ್ತಿನ ಜೊತೆ ಹೆಜ್ಜೆ ಹಾಕಿ ಕೃಷಿಯನ್ನು ಬಳಸಿಕೊಂಡರೆ ಕೈ ತುಂಬಾ ಸಂಪಾದನೆ ಮಾಡಬಹುದು
ಬಸವರಾಜು, ಬ್ಯಾತ ಗ್ರಾಮದ ರೈತ

'ನುಗ್ಗೆ ಸೊಪ್ಪಿನಲ್ಲಿ ಹೇರಳ ವಿಟಮಿನ್ ಇರುತ್ತದೆ ಎಂದು ಅನೇಕ ಆರ್ಯುವೇದ ವೈದ್ಯರು ಹೇಳಿದ್ದರು. ನುಗ್ಗೆ ಸೊಪ್ಪಿನ ಪುಡಿಯನ್ನು ಟೀ-ಕಾಫಿಯಂತೆ ದಿನಾ ಖಾಲಿ ಹೊಟ್ಟೆಗೆ ಕುಡಿಯುವುದರಿಂದ ದೇಹದಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ. ಕೊರೊನಾದ ಸಮಯದಲ್ಲಿ ನುಗ್ಗೆಪುಡಿಯನ್ನು ಜನರಿಗೆ ನೀಡಿದರೆ ಒಳಿತಾಗುತ್ತದೆ ಎಂದು ಆಲೋಚನೆ ಮಾಡಿ ನುಗ್ಗೆ ಮರಗಳನ್ನು ಬೆಳೆಸಲು ತೀರ್ಮಾನಿಸಿದೆ. ಒಂದು ಎಕರೆ ಪ್ರದೇಶದಲ್ಲಿ ನುಗ್ಗೆ ಮರಗಳನ್ನು ಹಾಕಿದೆ. ಜೀವಾಮೃತವನ್ನು ತಯಾರಿಸಿ ಗಿಡಗಳಿಗೆ ನುಗ್ಗೆ ಪುಡಿ ನೀಡಿದೆ. ಸಾವಯವ ಕೃಷಿಯ ಮೂಲಕ ನುಗ್ಗೆ ಗಿಡಗಳನ್ನು ಸಮೃದ್ಧವಾಗಿ ಬೆಳೆದೆ. ನುಗ್ಗೆ ಎಲೆಗಳನ್ನು ಕಿತ್ತು ಒಣಗಿಸಿ ಯಂತ್ರದಿಂದ ಪುಡಿ ಮಾಡಿ ಕೊಡಲು ಪ್ರಾರಂಭಿಸಿದೆ. ಸಾಕಷ್ಟು ಜನರು ಬಂದು ತೆಗೆದುಕೊಳ್ಳಲು ಪ್ರಾರಂಭಿಸಿದರು. ಅನೇಕ ಆಯುರ್ವೇದ ಕಂಪನಿಗಳು ತಾವೇ ಮುಂದೆ ಬಂದು ನುಗ್ಗೆಪುಡಿಯನ್ನು ಖರೀದಿ ಮಾಡಿದವು' ಎಂದರು.

'ಈಗ ವಾರಕ್ಕೆ 500 ಕೆ.ಜಿ. ಯಷ್ಟು ನುಗ್ಗೆಪುಡಿಯನ್ನು ಮಾರಾಟ ಮಾಡುತ್ತಿದ್ದೇನೆ. ಕೊರೊನಾ ಸಮಯದಲ್ಲಿ ನಷ್ಟವಾಗಿದ್ದ ಎಲ್ಲವನ್ನೂ ಇದರಿಂದ ತುಂಬಿಕೊಂಡಿದ್ದೇನೆ' ಎನ್ನುವುದು ಅವರ ವಿಶ್ವಾಸದ ಮಾತು.

'ಬಸವರಾಜು ಅವರು ಓದಿದ್ದು ತುಂಬಾ ಕಡಿಮೆ. ಆದರೆ, ಕೃಷಿ ಮೇಳಗಳ ಮೂಲಕ ಅವರು ಕೃಷಿ ಬಗ್ಗೆ ತುಂಬಾ ಕಲಿತು ಕೊಂಡಿದ್ದಾರೆ. ಹಾಗಾಗಿ ಅವರು ಸದಾ ಪ್ರಯೋಗಶೀಲತೆ ಇರುವ ನಮ್ಮ ಗ್ರಾಮದ ರೈತ' ಎನ್ನುತ್ತಾರೆ ಗ್ರಾಮದ ನಿವಾಸಿ ಜಯಸಿಂಹ.

12-08-2021 Pv Pg 6A

ಕರಗುತ್ತಿದೆ ಕೃಷಿ ಭೂಮಿ

ಬರಡಾಗಿದೆ ಶೇ.36.24 ಪ್ರದೇಶ | ಆಹಾರ ಕೊರತೆ ಭೀತಿ

■ ರಮೇಶ ದೊಡ್ಡಪುರ ಬೆಂಗಳೂರು

ಕೃಷಿ ಕ್ಷೇತ್ರದ ಬೆಳವಣಿಗೆಗಾಗಿ ಸರ್ಕಾರದ ವತಿಯಿಂದ ಹತ್ತಾರು ಯೋಜನೆ, ಕಾರ್ಯಕ್ರಮಗಳು ಅನುಷ್ಠಾನವಾಗಿರುವ ಹೊರತಾಗಿಯೂ ಹೆಚ್ಚುತ್ತಿರುವ ನಗರೀಕರಣ, ಕೈಗಾರಿಕೀಕರಣ ಹಾಗೂ ಗಣಿಗಾರಿಕೆಯಿಂದಾಗಿ ರಾಜ್ಯದ ಶೇ.36.24 ಭೂಮಿ ಬರಡಾಗಿದೆ. ಇದು ಭವಿಷ್ಯದಲ್ಲಿ ಮಾರಕ ಎಂದೇ ವಿಶ್ಲೇಷಿಸಲಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸಿದ್ಧಪಡಿಸಿರುವ ವರದಿಯಲ್ಲಿ ಈ ಆಘಾತಕಾರಿ ಮಾಹಿತಿ ಬಹಿರಂಗಗೊಂಡಿದೆ. ವಿವಿಧ ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಪರಿವರ್ತಿಸುವ ಕಾರ್ಯ ದೇಶದೆಲ್ಲೆಡೆ ನಡೆಯುತ್ತಿದೆ. ಕರ್ನಾಟಕದಲ್ಲೂ ಈ ಕಾರ್ಯ ಎಗ್ಗಿಲ್ಲದೆ ಸಾಗಿದೆ. ಭೂಮಿಯ ಫಲವತ್ತತೆ ಹಾಗೂ ಬಂಜರುಗೊಳಿಸುತ್ತಿರುವ ಪ್ರಮಾಣ ತಿಳಿಯಲು ಭಾರತೀಯ ರಿಮೋಟ್ ಸೆನ್ಸಿಂಗ್ (ಐಆರ್‌ಎಸ್) ಉಪಗ್ರಹದ ಮೂಲಕ ಪ್ರತಿ ಐದು ವರ್ಷಕ್ಕೊಮ್ಮೆ ನಡೆಸುವ 'ಬರಡುಗೊಳಿಸುವಿಕೆ, ಭೂಮಿ ಗುಣಮಟ್ಟ ಕುಸಿತ ಅಟ್ಲಾಸ್' ಪರೀಕ್ಷೆ ವರದಿ ಇತ್ತೀಚೆಗೆ ಬಿಡುಗಡೆಗೊಂಡಿದ್ದು, ಅದರಲ್ಲಿ ಹತ್ತಾರು ಕುತೂಹಲಕಾರಿ ಅಂಶ ಬಯಲಾಗಿದೆ.

ವಿಜಯವಾಣಿ ವಿಶೇಷ

1.55 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಬರಡಾಗಿರುವ ಕೃಷಿ ಭೂಮಿ

70 ಸಾವಿರ ಹೆಕ್ಟೇರ್ ಕಳೆದ 15 ವರ್ಷಗಳಲ್ಲಿ ಬರಡಾದ ಭೂಮಿ

ಕರ್ನಾಟಕಕ್ಕೆ ಎಚ್ಚರಿಕೆ: ವಿವಿಧ ಕಾರಣಗಳಿಂದಾಗಿ ಕರ್ನಾಟಕದ 1.55 ಲಕ್ಷ ಹೆಕ್ಟೇರ್ ಅಂದರೆ ಸುಮಾರು 3.8 ಲಕ್ಷ ಎಕರೆ ಪ್ರದೇಶ ಬರಡಾಗಿದೆ. ಕಳೆದ 15 ವರ್ಷದಲ್ಲೇ 70 ಸಾವಿರ ಹೆಕ್ಟೇರ್ ಭೂಮಿ ಫಲವತ್ತತೆ ಕಳೆದುಕೊಂಡಿರುವುದು ವರದಿಯಿಂದ ತಿಳಿದುಬಂದಿದೆ. ಐಆರ್‌ಎಸ್ ಉಪಗ್ರಹದ ದತ್ತಾಂಶಗಳ ಆಧಾರ ದಡಿ ಅಹಮದಾಬಾದ್‌ನಲ್ಲಿರುವ ಇಸ್ರೋ ಸ್ಪೇಸ್ ಅಪ್ಲಿಕೇಷನ್ ಸೆಂಟರ್ ವರದಿ ಸಿದ್ಧಪಡಿಸಿದೆ. ◆ಪುಟ 2


ಸಾಂದರ್ಭಿಕ ಚಿತ್ರ

ಪರಿಣಾಮಗಳೇನು?

- ಆಹಾರ ಉತ್ಪಾದನೆ ಕುಸಿತ
- ಆಹಾರಕ್ಕಾಗಿ ಪರಾವಲಂಬನೆ
- ಬಡತನ ಹೆಚ್ಚಳ
- ನಿರುದ್ಯೋಗ ಹೆಚ್ಚಳ
- ಸಮುದಾಯ, ರಾಜ್ಯಗಳ ನಡುವೆ ಸಂಘರ್ಷ
- ಮಾನವ ಸಾಮೂಹಿಕ ವಲಸೆ
- ರಾಜಕೀಯ ಅಸ್ಥಿರತೆ

15 ವರ್ಷದಲ್ಲಿ ಶೇ.0.1 ಭೂಮಿ ಫಲವತ್ತತೆ ಕಳೆದುಕೊಂಡಿದೆ ಎನ್ನುವುದು ಈಗ ಸಣ್ಣ ಪ್ರಮಾಣದಲ್ಲಿ ಕಾಣಿಸಬಹುದು. ಆದರೆ ಪ್ರಕೃತಿ ಸಂಬಂಧಿತ ಅಪಾಯಗಳು ಒಮ್ಮೆಲೆ ಹೆಚ್ಚಾಗುತ್ತವೆ. ಆಗ ನಿಯಂತ್ರಿಸಲು ನಮ್ಮಲ್ಲಿ ಶಕ್ತಿಯೇ ಇರುವುದಿಲ್ಲ. ಅಪಾಯ ಕಡೆಗಣಿಸದೆ ಮತ್ತಷ್ಟು ಕ್ರಿಯಾಶೀಲವಾಗುವ ಅವಶ್ಯಕತೆಯಿದೆ.

| ಡಾ. ರಾಜೇಂದ್ರ ಹೆಗಡೆ ಮುಖ್ಯ ವಿಜ್ಞಾನಿ, ಎನ್‌ಬಿಎಸ್‌ಎಸ್-ಎಲ್‌ಯುಪಿ, ಬೆಂಗಳೂರು ಕೇಂದ್ರ

ಅನ್ನಕ್ಕೂ ಸಂಕಷ್ಟ?

ಕೃಷಿ ಭೂಮಿ ಪ್ರಮಾಣ ತಗ್ಗುತ್ತಿರುವುದು ಭವಿಷ್ಯದಲ್ಲಿ ಆಹಾರ ಉತ್ಪಾದನೆ ಕೊರತೆ ಎದುರಾಗುವ ಗಂಭೀರ ಮುನ್ಸೂಚನೆ ನೀಡಿದೆ. ದೇಶದಲ್ಲಿ ಗುಣಮಟ್ಟ ಕಳೆದುಕೊಂಡಿರುವ ಭೂಮಿಯನ್ನು ಮರಳಿ ಪಡೆಯುವ ಸಲುವಾಗಿ ಕೇಂದ್ರ ಸರ್ಕಾರ ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಂಡು ಕಾರ್ಯಪ್ರವೃತ್ತವಾಗಿದ್ದರೆ ರಾಜ್ಯದಲ್ಲಿ ಇದು ಹಿಮ್ಮುಖ ಚಲನೆಯಾಗಿರುವುದು ಆತಂಕ ಮೂಡಿಸಿದೆ.

ಇತರ ಚಟುವಟಿಕೆಗೆ ಅರಣ್ಯ ನಾಶ | ಬಂಜರಾಗುವಿಕೆಯಲ್ಲಿ 4ನೇ ಸ್ಥಾನ

ರಾಜ್ಯದಲ್ಲಿ ಕರಗುತ್ತಿದೆ ಕೃಷಿ ಭೂಮಿ

ಮೊದಲನೇ ಪುಟದಿಂದ...

ಇದರಂತೆ ಕರ್ನಾಟಕದ ಒಟ್ಟು ಭೂಮಿಯ ಶೇ.36.29 ಅಂದರೆ 60.96 ಲಕ್ಷ ಹೆಕ್ಟೇರ್ ಪ್ರದೇಶ 2018-19ರಲ್ಲಿ ಬಂಜರಾಗಿತ್ತು. 2003-05ರಲ್ಲಿ ನಡೆಸಿದ ಅಧ್ಯಯನ ದಲ್ಲಿ ಈ ಪ್ರಮಾಣ ಶೇ.36.19 ಹಾಗೂ 2011-13ರ ವರದಿಯಲ್ಲಿ ಶೇ.36.24 ದಾಖಲಾಗಿತ್ತು. ಅಂದರೆ ಕಳೆದ 15 ವರ್ಷದಲ್ಲಿ ಕರ್ನಾಟಕದ ಶೇ.0.1 ಭೂಮಿ ಕೈತಪ್ಪಿದೆ.

ಅರಣ್ಯೀಕರಣ ಅಗತ್ಯ: ನೆಲದ ಮೇಲ್ಮೈ ಬರಡಾಗುತ್ತಿರುವುದರಿಂದ ಕರ್ನಾಟಕದಲ್ಲಿ ಅತಿ ಹೆಚ್ಚು ಪ್ರಮಾಣದ (ಶೇ.26.13) ಭೂಮಿ ಫಲವತ್ತತೆ ಕಳೆದುಕೊಳ್ಳುತ್ತಿದೆ. ಕೃಷಿ ಚಟುವಟಿಕೆಗಾಗಿ ಅರಣ್ಯನಾಶ (ಶೇ.8.85) ಆಗುತ್ತಿದೆ. ಆದರೆ ಇವೆರಡೂ ಕ್ಷೇತ್ರಗಳು ಕಳೆದ 15 ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿವೆ.

ಸರ್ಕಾರ ಹಾಗೂ ಸಂಘಸಂಸ್ಥೆಗಳ ಅರಣ್ಯೀಕರಣ ಯೋಜನೆಗಳ ಕಾರಣದಿಂದ, ಕಳೆದ 5 ವರ್ಷದಲ್ಲಿ



ಮಣ್ಣಿನ ಸವೆತ ಕಡಿಮೆಯಾಗುತ್ತಿದೆ. ಅದೇ ರೀತಿ ಕೃಷಿ ಚಟುವಟಿಕೆಯಿಂದ ಆಗುವ ಅರಣ್ಯ ನಾಶ ಪ್ರಮಾಣವೂ ಕಡಿಮೆ ಆಗುತ್ತಿದೆ.

ದೇಶದಲ್ಲಿ ನಾಲ್ಕನೇ ಸ್ಥಾನ: ದೇಶದಲ್ಲಿ ಒಟ್ಟು ಬಂಜರಾಗುತ್ತಿರುವ ಭೂಮಿಯಲ್ಲಿ ಶೇ.23.79 ಪಾಲನ್ನು ಕರ್ನಾಟಕ ಸೇರಿ 9 ರಾಜ್ಯಗಳು ಹೊಂದಿವೆ. ರಾಜಸ್ಥಾನ, ಮಹಾರಾಷ್ಟ್ರ, ಗುಜರಾತ್ ಮೊದಲ ಮೂರು ಸ್ಥಾನದಲ್ಲಿದ್ದರೆ, ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ರಾಜಸ್ಥಾನದಲ್ಲಿ ಗಾಳಿಯ ಕಾರಣಕ್ಕೆ ಭೂಮಿಯ ಮೇಲ್ಮೈ ಸವೆತ ಆಗುತ್ತಿದ್ದರೆ ಉಳಿದ ಮೂರು ರಾಜ್ಯಗಳು ವಸತಿ, ಕೈಗಾರಿಕೆ ಉದ್ದೇಶಗಳಿಗೆ ಕೃಷಿ ಭೂಮಿಯನ್ನು ಬಳಸುವುದರಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ತಜ್ಞರು ತಿಳಿಸುತ್ತಾರೆ.

ಮರಳಿ ಫಲವತ್ತತೆ ಮಾಡುವ ಗುರಿ

2019ರಲ್ಲಿ ವಿಶ್ವಸಂಸ್ಥೆಯ ಯುಎನ್‌ಸಿಸಿಡಿಯ 14ನೇ ಅಧಿವೇಶನವನ್ನು (ಸಿಒಪಿ-14) ಭಾರತ ಆಯೋಜಿಸಿತ್ತು. ಬರಡಾಗಿರುವ ಎಲ್ಲ ಭೂಮಿಯನ್ನೂ ಮರಳಿ ಪಡೆಯಲು ಸಾಧ್ಯವಿಲ್ಲ. ಆದರೆ 2030ರ ವೇಳೆಗೆ ವಿಶ್ವದಲ್ಲಿ ಫಲವತ್ತತೆ ಕಳೆದುಕೊಂಡಿರುವ 2.6 ಕೋಟಿ ಹೆಕ್ಟೇರ್ ಭೂಮಿಯನ್ನು ಮರಳಿ ಫಲವತ್ತತೆ ಮಾಡಲಾಗುವುದೆಂದು ಈ ಅಧಿವೇಶನದಲ್ಲಿ ಏರ್ಪಟ್ಟ ಒಪ್ಪಂದಕ್ಕೆ ಭಾರತವೂ ಸಹಿ ಹಾಕಿದೆ.

ರಾಜ್ಯದ 29 ಜಿಲ್ಲೆಗಳಲ್ಲೂ ಭೂ ಸರ್ವೇಕ್ಷಣೆ

ಭೂ ಸಂಪನ್ಮೂಲ ಕಾರ್ಡ್: ರಾಜ್ಯಕ್ಕೆ ವಿಸ್ತರಣೆ

• ಇ. ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಬರಗಾಲವನ್ನು ಸಮರ್ಥವಾಗಿ ಎದುರಿಸಲು 'ಸುಜಲ-3' ಯೋಜನೆಯ ಮಾದರಿಯಲ್ಲೇ ರಾಜ್ಯದ 29 ಜಿಲ್ಲೆಗಳಲ್ಲೂ ಭೂ ಸರ್ವೇಕ್ಷಣೆ ಕೈಗೊಂಡು, ಭೂ ಸಂಪನ್ಮೂಲ ಕಾರ್ಡ್ ವಿತರಿಸಲು ಸರ್ಕಾರ ಮುಂದಾಗಿದೆ.

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು, ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಭೂ ಸರ್ವೇಕ್ಷಣೆ ಮತ್ತು ಭೂ ಬಳಕೆ ಯೋಜನೆ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ಆಶ್ರಯದಲ್ಲಿ ರಾಜ್ಯದ ಕಿರು ಜಲಾನಯನ ಪ್ರದೇಶದಲ್ಲಿ ಈ ಸಮೀಕ್ಷೆ ನಡೆಯಲಿದೆ. ಹಿಂದೆ ವಿಶ್ವಬ್ಯಾಂಕ್ ನೆರವಿನಲ್ಲಿ ಪ್ರಾಯೋಗಿಕವಾಗಿ ರಾಜ್ಯದ 11 ಜಿಲ್ಲೆಗಳಲ್ಲಿ ಈ ಯೋಜನೆ ಕೈಗೊಳ್ಳಲಾಗಿತ್ತು. ಇದರಲ್ಲಿ ಸುಮಾರು 2,500 ಜಲಾನಯನ ಪ್ರದೇಶದಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಅದನ್ನೂ ಒಳಗೊಂಡು ರಾಜ್ಯದ ಉಳಿದ ಭಾಗಗಳಿಗೆ ಈ ಯೋಜನೆಯನ್ನು ಈಗ ವಿಸ್ತರಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ರಾಜ್ಯದ ಇತರ ಜಿಲ್ಲೆಗಳ 4.76ಲಕ್ಷ ಹೆಕ್ಟೇರ್ ಕೃಷಿ ಜಮೀನಿನ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ಮುಂಗಾರು ಹಂಗಾಮಿನಲ್ಲಿ ಪ್ರತಿ ಕಿರು ಜಲಾನಯನ ಪ್ರದೇಶಗಳಲ್ಲಿ ಪ್ರತಿ 310 ಮೀಟರ್ ಅಂತರದಲ್ಲಿ ಮೇಲ್ಮೈ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯದಲ್ಲಿ ಅಧ್ಯಯನ ನಡೆಸಲಾಗುವುದು. ಮಣ್ಣಿನ ರಸಸಾರ, ಲವಣಾಂಶ, ಸಾವಯವ ಅಂಶ ಮತ್ತು ಪೋಷಕಾಂಶಗಳ ನಕ್ಷೆಗಳನ್ನು ತಯಾರಿಸಲಾಗುವುದು. ಇದರಿಂದ ಮಣ್ಣಿನ ಗುಣಲಕ್ಷಣ ಮತ್ತು ನೀರಿನ ಗುಣಧರ್ಮಗಳಿಗೆ ಅನುಗುಣವಾಗಿ ಅಲ್ಲಿ ಬೆಳೆಯಬಹುದಾದ ಬೆಳೆಗಳ ಕುರಿತೂ ಸಲಹೆ ನೀಡಲಾಗುವುದು. ಕೃಷಿಗೆ ಯೋಗ್ಯವಲ್ಲದ ಜಮೀನುಗಳ ಪಟ್ಟಿಯನ್ನೂ ಸಿದ್ಧಪಡಿಸಿ ವರದಿ ಸಲ್ಲಿಸಲಾಗುವುದು' ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಯೋಜನಾ ನಿರ್ದೇಶಕ ಡಾ. ಪಿ.ಎಲ್.ಪಾಟೀಲ ವಿವರಿಸಿದರು.

'ಪ್ರತಿ ಕೃಷಿ ಜಮೀನಿನ ನಕ್ಷೆಯನ್ನು ತಯಾರು ಮಾಡಲಾಗುವುದು. ಕೃಷಿ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯಲ್ಲಿ ಈ ಸಮೀಕ್ಷೆ ನಡೆಸಲಿವೆ. ಒಂದು ವರ್ಷ ಅವಧಿಯಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಯೋಜನೆಗಾಗಿ ₹20.71ಕೋಟಿ ಮಂಜೂರು
- 100 ಬರಪೀಡಿತ ತಾಲ್ಲೂಕುಗಳಲ್ಲಿಯೂ ಸಮೀಕ್ಷೆ

ಧಾರವಾಡ ಕೃಷಿ ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿ 88 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸಮೀಕ್ಷೆ ಕೈಗೊಳ್ಳಲು ₹3.68 ಕೋಟಿ ಅನುದಾನ ಮಂಜೂರಾಗಿದೆ – **ಡಾ. ಪಿ.ಎಲ್.ಪಾಟೀಲ,** ಧಾರವಾಡ ಕೃಷಿ ವಿಶ್ವವಿದ್ಯಾಲಯದ ಯೋಜನಾ ನಿರ್ದೇಶಕ



ಸಾಂದರ್ಭಿಕ ಚಿತ್ರ

ಭೂ ಸಂಪನ್ಮೂಲ ಕಾರ್ಡ್ ಯೋಜನೆ...

ಯೋಜನೆಯಲ್ಲಿ ಪ್ರತಿ 500ರಿಂದ ಒಂದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿರುವ ಕಿರು ಜಲಾನಯನ ಪ್ರದೇಶದಲ್ಲಿನ ಮಣ್ಣಿನ ಆಳ, ಜಾಗದಲ್ಲಿರುವ ಇಳಿಜಾರು, ಮಣ್ಣಿನ ಕೊಚ್ಚಿಕೊಂಡು ಹೋಗುವ ಪ್ರಮಾಣ, ಗಡಸುತನ ಹಾಗೂ ಮಣ್ಣಿನಲ್ಲಿನ ಪೋಷಕಾಂಶಗಳನ್ನು ಸಮೀಕ್ಷೆ ವೇಳೆ ಪತ್ತೆ ಮಾಡಿ ಭೂ ಸಂಪನ್ಮೂಲ ಮಾಹಿತಿ ಕಾರ್ಡ್ ಅನ್ನು ರೈತರಿಗೆ ವಿತರಿಸುವುದು ಈ ಯೋಜನೆಯ ಭಾಗ.

ಈ ಯೋಜನೆಗೆ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವೂ ನೆರವಾಗಲಿದೆ.

12-08-2021
Pv Pg 06

ಮೊದಲ ಬಾರಿಗೆ ತೆಂಗು ರಫ್ತಿಗೆ ಅವಕಾಶ: ಶೋಭಾ ಕರಂದ್ಲಾಜೆ

ಕೃಷಿಗೆ ₹1ಲಕ್ಷ ಕೋಟಿ ಅನುದಾನ



ಹೊಸದಿಲ್ಲಿ: ಕೇಂದ್ರ ಸರಕಾರವು ಕೃಷಿರಂಗದ ಅಭಿವೃದ್ಧಿಗಾಗಿ ಒಂದು ಲಕ್ಷ ಕೋ.ರೂ.ಗಳನ್ನು ನೀಡಿದ್ದು, ಇದೇ ಮೊದಲ ಬಾರಿಗೆ ತೆಂಗು ರಫ್ತಿಗೂ ಅವಕಾಶ ನೀಡಿದೆ ಎಂಬುದಾಗಿ ಕೇಂದ್ರ ಕೃಷಿ ಖಾತೆಯ ರಾಜ್ಯಸಚಿವೆ ಶೋಭಾ ಕರಂದ್ಲಾಜೆ ಬುಧವಾರ ಹೇಳಿದ್ದಾರೆ.



ಈ ವರೆಗೆ ತೆಂಗು ರಫ್ತಿಗೆ ಅವಕಾಶ ಇರಲಿಲ್ಲ. ಆದರೆ ಇದೀಗ ಕೇಂದ್ರ ಸರಕಾರ ಕೃಷಿ ರಂಗಕ್ಕೆ ಒಂದು ಲಕ್ಷ ಕೋ.ರೂ. ಗಳನ್ನು ನೀಡಿದೆ. ತೆಂಗಿನ ರಫ್ತಿಗೂ ಅವಕಾಶ ಕಲ್ಪಿಸುತ್ತಿದೆ.ತೆಂಗು ಅಭಿವೃದ್ಧಿ ಏಜೆನ್ಸಿಯ ಅಧ್ಯಕ್ಷರನ್ನಾಗಿ ಖಾಸಗಿ ವ್ಯಕ್ತಿಯೊಬ್ಬರನ್ನು ನೇಮಿಸಲಾಗುವುದು ಮತ್ತು ಈ ಏಜೆನ್ಸಿ ಮೂಲಕ ವಿದೇಶಗಳಿಗೆ ತೆಂಗಿನ ರಫ್ತಿಗೆ ಅವಕಾಶ ನೀಡಲಾಗುವುದು ಎಂದು ಅವರು ಹೇಳಿದರು. ಆಗ್ರೋ -ಶಿಂಜಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿಯವರು ಒಪ್ಪಿಗೆ ನೀಡಿದ್ದಾರೆ ಎಂದರು.

ಕರ್ನಾಟಕಕ್ಕೆ ₹500ಕೋಟಿ

2021-22ನೇ ಸಾಲಿನ ಬಜೆಟ್‌ನಲ್ಲಿ ಆಗ್ರೋ-ಶ್ರಿಂಪ್ ಫಾರ್ಮಿಂಗ್ ಯೋಜನೆಗೆ ಕೇಂದ್ರ ಸರಕಾರ 4000ಕೋ.ರೂ.ಗಳನ್ನು ನೀಡಿದೆ.ಈ ಪೈಕಿ 500ಕೋ.ರೂ.ಗಳನ್ನು ಕರ್ನಾಟಕಕ್ಕೆ ನಿಗದಿಪಡಿಸಲಾಗಿದ್ದು, ಈ ಪೈಕಿ ಈಗಾಗಲೇ 300ಕೋ.ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.ಇದನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಶೋಭಾ ಕರಂದ್ಲಾಜೆ ಮನವಿ ಮಾಡಿಕೊಂಡರು. 2026ರ ವೇಳೆಗೆ ದೇಶದಲ್ಲಿ ಕಡಿಮೆ ನೀರಿನ ಆಶ್ರಯ ಇರುವ 112ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಶಿಂಜಿ ಯೋಜನೆ ಅನುಷ್ಠಾನಗೊಳ್ಳಲಿದೆ.ಈ ಪೈಕಿ ಗರಿಷ್ಠ ಅವಕಾಶ ಕರ್ನಾಟಕಕ್ಕೆ ಲಭಿಸಲಿದ್ದು, ಬೃಹತ್ ಪ್ರಮಾಣದಲ್ಲಿ ಸಿರಿಧಾನ್ಯಗಳನ್ನು ಬೆಳೆದು ವಿವಿಧ ದೇಶಗಳಿಗೆ ರಫ್ತು ಮಾಡಲು ಪ್ರೋತ್ಸಾಹ ನೀಡಲಾಗುವುದು.2023ರಲ್ಲಿ ಅಂತಾರಾಷ್ಟ್ರೀಯ ರಾಗಿ ದಿನ ಆಚರಿಸಲಾಗುವುದು. ಇದಕ್ಕೆ ವಿಶ್ವಸಂಸ್ಥೆಯೂ ಅನುಮೋದನೆ ನೀಡಿದೆ. ಇದು ರಾಗಿ ಬೆಳೆಗಾರರ ಆದರಲ್ಲೂ ಕರ್ನಾಟಕದ ರಾಗಿ ಬೆಳೆಗಾರರ ಪಾಲಿಗೆ ಅಪೂರ್ವ ಅವಕಾಶ ಒದಗಿಸಿಕೊಡಲಿದೆ ಎಂಬುದಾಗಿ ಶೋಭಾ ಕರಂದ್ಲಾಜೆ ನುಡಿದರು.

12-08-2021
Pv Pg 6A

UASB LIBRARY

Newspaper Clippings

Thursday 12-08-2021 Pg .4

ಕೃಷಿಯಲ್ಲಿ ಯುವಶಕ್ತಿಯ ಕಮಾಲ್

ಗ್ರಾಮೀಣ ಯುವಕರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ ಎಂಬ ಕಳವಳದ ನಡುವೆಯೇ ಕೃಷಿಯಲ್ಲಿ ತೊಡಗುತ್ತಿರುವ ವಿದ್ಯಾವಂತ ಯುವಕರ ಸಂಖ್ಯೆ ಹೆಚ್ಚುತ್ತಿರುವುದು ಪ್ರಬಲ ಆಶಾವಾದ ಮೂಡಿಸಿದೆ. ಬೇಸಾಯವೇ ಉತ್ತಮ, ಕೃಷಿಯಿಂದ ನೆಮ್ಮದಿ ಇದೆ ಎಂದು ನಂಬಿದ ಇಂದಿನ ಯುವಶಕ್ತಿ 'ಕೃಷಿ' ಕ್ಷೇತ್ರದ ಶಕ್ತಿಯಾಗಿಯೂ ಮಾರ್ಪಟ್ಟಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಗೋವು ಸಾಕಾಣಿಕೆ, ಸಾಂಬಾರ ಬೆಳೆಗಳ ಬೇಸಾಯ, ಸಿರಿಧಾನ್ಯ ತಳಿಗಳ ಸಂರಕ್ಷಣೆ ಹೀಗೆ ಹಲವು ಆಯಾಮಗಳಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ಯುವ ದಿನದ ನಿಮಿತ್ತ ಅಂತಹ ಕೆಲ ಯುವ ಕೃಷಿಕರ ಮಾಹಿತಿ ನೀಡಿದ್ದಾರೆ ನಾಗರಾಜ ಮತ್ತಿಗಾರ.

ಇಂದು ಅಂತಾರಾಷ್ಟ್ರೀಯ ಯುವ ದಿನ



ಸ್ವಾವಲಂಬನೆಯಿಂದ ನೆಮ್ಮದಿ



ಮಂಡ್ಯ ಜಿಲ್ಲೆಯ ದುದ್ದ ಬಿ.ಹೊಸಳ್ಳಿಯ ಯುವ ರೈತ ಹೇಮಂತಕುಮಾರ ಎಚ್.ಯು. ಮೂರೂವರೆ ಎಕರೆ ಪ್ರದೇಶದಲ್ಲಿ ಭತ್ತ, ಕಬ್ಬು, ತೆಂಗು ಕೃಷಿ ಮಾಡುವುದರ ಜತೆಯಲ್ಲಿ ಕೊತ್ತಂಬರಿ, ಸಬ್ಬಸಿಗೆ, ಪಾಲಕ, ಮೆಂತೆ ಸೊಪ್ಪನ್ನು ಬೆಳೆಯುತ್ತಿದ್ದಾರೆ. 10 ಗುಂಟೆ ಜಾಗದಲ್ಲಿ ತೆಂಗನ್ನು ಬೆಳೆಯುತ್ತಿದ್ದು, ಅದರಲ್ಲಿಯೇ ಮಿಶ್ರ ಬೆಳೆಯಾಗಿ ಶುಂಠಿ, ಲಿಂಬು ಇವೆ. ಅಲ್ಲದೆ, ಗದ್ದೆ ಕೆಲಸ ಮುಗಿದ ನಂತರ ಸೊಪ್ಪುಗಳನ್ನು ಬೆಳೆಯುತ್ತಾರೆ. ಮೂರು ಎಕರೆಯಲ್ಲಿ ಭತ್ತ ಬೆಳೆಯುತ್ತಿದ್ದು, ದೇಸಿ ತಳಿಗಳಿಗೆ ಆದ್ಯತೆ ನೀಡಿದ್ದಾರೆ. ರಾಜಮುಡಿ, ಸಿದ್ದಸಣ್ಣ, ಸೇಲಂಸಣ್ಣ, ಎಚ್ಎಂಟಿ ಭತ್ತ ಬೆಳೆಯುತ್ತಾರೆ. ಸುತ್ತಮುತ್ತಲಿನ ಸಮಾನ ಮನಸ್ಸಿನ ರೈತರು ಜತೆಯಾಗಿ 'ಬಯಲುಸೀಮೆ ಸಾವಯವ ಬೆಳೆಗಾರರ ಸಂಘ'ವನ್ನು ಕಟ್ಟಿಕೊಂಡು ಮಂಡ್ಯದಲ್ಲಿ ಭಾನುವಾರ ಬಿಟ್ಟು ಉಳಿದ ದಿನ ಸಂತೆಯನ್ನು ಮಾಡುತ್ತಾರೆ. ಈ ಮೂಲಕ ತಾವು ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಕಂಡುಕೊಂಡಿದ್ದಾರೆ. ಇದರೊಂದಿಗೆ 'ಸಾವಯವ ಸಂತೆ' ಎಂಬ ಬ್ರ್ಯಾಂಡ್‌ನೊಂದಿಗೆ ಪ್ಯಾಕೆಟ್ ಮಾಡಿ ಬೇಡಿಕೆಗೆ ಅನುಗುಣವಾಗಿ ಮಾರಾಟ ಮಾಡುತ್ತಿದ್ದಾರೆ. ಮಂಡ್ಯ ಮಾತ್ರವಲ್ಲದೆ, ಬೆಂಗಳೂರಿನಲ್ಲೂ ಇದಕ್ಕೆ ಮಾರುಕಟ್ಟೆ ಇದೆ. 'ರೈತರು ಕೂಲಿಯನ್ನು ನಂಬದೆ ಕೆಲಸವನ್ನು ಅವರೇ ಮಾಡಿಕೊಳ್ಳಬೇಕು. ನಾವು ಹೆಚ್ಚು ದುಡಿದಷ್ಟು ನಮಗೆ ಉಳಿತಾಯ ಜಾಸ್ತಿ. ಸ್ವಾಬಲಂಬಿ ರೈತನಾದರೆ ನೆಮ್ಮದಿಯೂ ಹೆಚ್ಚು' ಎನ್ನುತ್ತಾರೆ ಹೇಮಂತಕುಮಾರ (99456-43770).

ಸುಂದರ ಬದುಕು



ವಾಣಿ ಶ್ರೀಹರ್ಷ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲುಕಿನ ಕುಂಬ್ರಿಉಬ್ಬಿನವರು. ಇವರು ಸ್ವಂತ ಆಸಕ್ತಿಯಿಂದ ಗೋವುಗಳನ್ನು ಸಾಕುತ್ತಿದ್ದಾರೆ. 'ಯಾರಿಗೆ ಆಕಳುಗಳನ್ನು ಸಾಕಲು ಸಾಧ್ಯವಿಲ್ಲವೋ ಅವುಗಳನ್ನು ನಾವು ಸಾಕುತ್ತೇವೆ' ಎಂಬ ಸಂಕಲ್ಪದೊಂದಿಗೆ 'ಸುರಭಿ' ಗೋಶಾಲೆ ಆರಂಭಿಸಿದ್ದಾರೆ. ವಾಣಿ ಅವರ ಪತಿ ಶ್ರೀಹರ್ಷ ಸಾವಯವ ಕೃಷಿಕರು. ಇವರ ಕೃಷಿಗೆ ಸಾಥ್ ನೀಡುವ ಜತೆಯಲ್ಲಿ ತಾವು ಬೆಳೆದ ಬೆಳೆಗಳ ಮೌಲ್ಯವರ್ಧನೆಯಲ್ಲಿ ವಾಣಿ ತೊಡಗಿಸಿಕೊಂಡಿದ್ದಾರೆ. ಕಷಾಯಪುಡಿ, ಅರಿಷಿಣ ಪುಡಿ, ಕಾಳುಮೆಣಸಿನ ಪುಡಿ 'ಫಲಶ್ರೀ' ಬ್ರ್ಯಾಂಡ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಸುರಭಿ ಗೋಶಾಲೆಯಲ್ಲಿರುವ ಆಕಳುಗಳಿಗೆ ಬೇಕಾದ ಮೇವುಗಳನ್ನು ಇವರೇ ಬೆಳೆದುಕೊಳ್ಳುತ್ತಿದ್ದಾರೆ. 'ಏಕಾಂತ, ನಿಸರ್ಗ ಇವು ನನಗೆ ತುಂಬ ಇಷ್ಟ. ಇದಕ್ಕೆ ಪೂರಕವಾಗಿರುವುದು ಕೃಷಿ. ಬೇಸಾಯ ಎನ್ನುವುದು ಲಾಭ-ನಷ್ಟದ ಉದ್ಯಮ ಅಲ್ಲ. ಇದೊಂದು ಭಾವನೆ. ಇದರಲ್ಲಿದ್ದು ಸುಂದರ ಬದುಕು ಕಾಣಬೇಕೆಂದರೆ ಮೌಲ್ಯವರ್ಧನೆ ಮಾಡಬೇಕು. ಭೂಮಿತಾಯಿಯ ಸೇವೆ ಮಾಡಬೇಕು. ಆಗ ನಮಗೆ ಇದು ಸುಂದರ ಬದುಕನ್ನು ಕೊಡುತ್ತದೆ' ಎನ್ನುತ್ತಾರೆ ವಾಣಿ (82175-73938).

ವ್ಯವಸ್ಥಿತ ಕೃಷಿಯಿಂದ ಲಾಭ

'ನನ್ನ ತಂದೆ ಆಧುನಿಕ ಕೃಷಿಗೆ ಒತ್ತು ಕೊಡುತ್ತಿದ್ದಾರೆ. ಊರಿನಲ್ಲಿ ಅಪ್ಪನನ್ನು ಅನುಸರಿಸುತ್ತಿರುವ ಅನೇಕ ಕೃಷಿಕರಿದ್ದಾರೆ. ಕೃಷಿಯೊಂದಿಗೆ ಸಾಮಾಜಿಕ ಜೀವನದಲ್ಲಿ ತೊಡಗಲು ಅನುಕೂಲ' ಎನ್ನುವ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ತಾಲೂಕಿನ ಹಳವಳ್ಳಿಯ ಶಶಾಂಕ್ ಬಿಬಿಎ ವ್ಯಾಸಂಗ ಮಾಡಿ ಬೆಂಗಳೂರು ಸೇರಿದ್ದರು. ಆದರೆ, ಕೃಷಿ ಮೇಲಿನ ಆಸಕ್ತಿ ಊರಿಗೆ ಬರುವಂತೆ ಮಾಡಿತು. ಇವರು ಅಡಕೆ, ಕಾಳುಮೆಣಸು, ವೆಂಗುರ್ಲಾ 7 ಗೇರು, ಅಗರ್‌ವುಡ್, ಸಿಲ್ವರ್ ಓಕ್, ಗ್ಲಿರಿಸಿಡಿಯಾ ಮತ್ತು ಗೇರುಮರಕ್ಕೆ ಕಾಳುಮೆಣಸು, ಬಳ್ಳಿಯನ್ನು ಹಬ್ಬಿಸಿ ಆದಾಯ ಪಡೆಯುತ್ತಿದ್ದಾರೆ. 'ಕೃಷಿಯನ್ನು ನಂಬಿದರೆ ಯಾವುದೇ ತೊಂದರೆ ಇಲ್ಲ. ಇಲ್ಲಿ ಹಣ ತೊಡಗಿಸಿ ಹಣ ಪಡೆಯಬೇಕು. ಆಗ ಮಾತ್ರ ಯಶಸ್ಸು ಪಡೆಯಲು ಸಾಧ್ಯ' ಎನ್ನುತ್ತಾರೆ ಶಶಾಂಕ್ (88922-29496).



ಉದ್ಯೋಗ ಭದ್ರತೆಯ ಕ್ಷೇತ್ರ



ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಂತ ವೈದ್ಯರಾಗಿದ್ದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕಾನಳ್ಳಿಯ ವಿನಯ ನಾಯ್ಕ ಅವರಿಗೆ ಕೃಷಿ ಮೇಲೆ ಎಲ್ಲಿಲ್ಲದ ಆಸಕ್ತಿ. ಅದೇ ಕಾರಣಕ್ಕಾಗಿ ಬೆಂಗಳೂರನ್ನು ಬಿಟ್ಟು ಊರಿಗೆ ಮರಳಿ ಕೃಷಿ ಕಾಯಕದಲ್ಲಿ ತೊಡಗಿದ್ದಾರೆ. ತಾವು ಕಲಿತ ದಂತ ವೈದ್ಯಕೀಯ ವಿದ್ಯೆಗೆ ಎರಡನೇ ಆದ್ಯತೆ. ಕೃಷಿಯೇ ಇವರ ಪ್ರಥಮ ಆದ್ಯತೆ. ತಮಗಿದ್ದ ಪಾಳು ಬಿದ್ದ ಗದ್ದೆಯನ್ನು ಹಸನಾಗಿ ಮಾಡಿ ಸಿರಿ ಪದ್ಧತಿಯಲ್ಲಿ ಭತ್ತದ ಕೃಷಿ ಮಾಡಿದ್ದಾರೆ. ಮೊದಲ ಬೆಳೆಯಲ್ಲೇ ಎಕರೆಗೆ 20 ಕ್ವಿಂಟಾಲ್ ಭತ್ತ ಪಡೆದರು. ಭೂಮಿತಾಯಿಯನ್ನು ನಂಬಿದರೆ ನಮ್ಮ ಕೈ ಬಿಡುವುದಿಲ್ಲ ಎಂಬ ದೃಢನಿರ್ಧಾರ ಇವರದ್ದಾಯಿತು. ಊರಿನ ಬಳಿಯ ಸಣ್ಣ ಪಟ್ಟಣ ಕಾರ್ಗಲ್‌ನಲ್ಲಿ ಕ್ಲಿನಿಕ್ ಆರಂಭಿಸಿದರು. ಭಾನುವಾರ ಪೂರ್ಣ ದಿನ ಬೇಸಾಯದಲ್ಲಿ ನಿರತರಾಗುವ ಇವರು, ಕಲ್ಲಂಗಡಿ, ಅನಾನಸ್ ಬೆಳೆಯುತ್ತಾರೆ. 'ರೈತಾಪಿ ಬದುಕು ಉತ್ತಮ. ನಮ್ಮ ಆರೋಗ್ಯಕ್ಕೆ ಪೂರಕವಾಗಿರುವುದನ್ನು ನಾವೇ ಬೆಳೆದುಕೊಳ್ಳಬಹುದು. ಆಸಕ್ತಿ ಇದ್ದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಮಾಡಬಹುದು. ಅಲ್ಲದೆ, ಜಗತ್ತಿನ ಯಾವುದೇ ಕ್ಷೇತ್ರಕ್ಕೆ ಹೋದರೂ ಉದ್ಯೋಗ ಭದ್ರತೆ ಇಲ್ಲ. ಆದರೆ ಬೇಸಾಯ ಕ್ಷೇತ್ರದಲ್ಲಿ ಆ ಭದ್ರತೆ ಇದೆ. ನಾವು ಬೆಳೆದು ನಾವು ತಿನ್ನಬಹುದು. ಯಾವುದಕ್ಕೆ ಬೇಡಿಕೆ ಕಡಿಮೆಯಾದರೂ ಆಹಾರ ಪದಾರ್ಥಗಳಿಗೆ ಬೇಡಿಕೆ ಕಡಿಮೆ ಆಗುವುದಿಲ್ಲ' ಎನ್ನುವ ಡಾ.ವಿನಯ ನಾಯ್ಕ (99009-11506) ಅವರ ಮಾತು ಇತರ ಯುವಕರಿಗೆ ಸ್ಫೂರ್ತಿ.

ಸಿರಿಧಾನ್ಯ ಸಮೃದ್ಧಿ

ಆಹಾರ ಬೆಳೆ ಆದರಲ್ಲೂ ಜೀವಕ್ಕೆ ಹಿತ, ಶಕ್ತಿ, ರೋಗನಿರೋಧಕ ಶಕ್ತಿ ಹೆಚ್ಚಿಸುವ ಬೆಳೆಗಳಿಗೆ ಇಂದು ಹೆಚ್ಚು ಮೌಲ್ಯವಿದೆ. ಈ ಪೈಕಿ ಪ್ರಮುಖವಾದುದು ರಾಗಿ. ಇವುಗಳ ಬೀಜೋತ್ಪಾದನೆ ಜತೆಯಲ್ಲಿ ಶೇಂಗಾ, ತೊಗರಿ ಬೆಳೆಯುತ್ತಿದ್ದಾರೆ ಯುವರೈತ ಈಶ್ವರ ಗೌಡ ಪಾಟೀಲ (ಸುನೀಲ್). ಧಾರವಾಡ ಜಿಲ್ಲೆ ಕುಂದಗೋಳ ತಾಲೂಕಿನ ಮತ್ತಿಗಟ್ಟಿ ಗ್ರಾಮದವರಾದ ಇವರ ಜಮೀನು ಹತ್ತಿರದ ಹನುಮನಹಳ್ಳಿಯಲ್ಲಿದೆ. ಈ ಬಾರಿ ಇವರು ನಾಲ್ಕೂವರೆ ಎಕರೆ ಪ್ರದೇಶದಲ್ಲಿ ಜಗಳೂರು ರಾಗಿಯನ್ನು ಬಿತ್ತಿದ್ದಾರೆ. ಮೂರು ಎಕರೆಯಲ್ಲಿ ಶೇಂಗಾ ಬೆಳೆಯೂ ಇದೆ. ಇದರೊಂದಿಗೆ 75 ಬಗೆಯ ರಾಗಿ ತಳಿಯನ್ನು ಸಂರಕ್ಷಿಸಿ, ಬೀಜೋತ್ಪಾದನೆ ಮಾಡುವ ಇರಾದೆ ಹೊಂದಿದ್ದಾರೆ. ಈ ಕಾರಣದಿಂದ ಈಗಾಗಲೇ 30 ತರಹದ ರಾಗಿಯನ್ನು ಬಿತ್ತಿದ್ದಾರೆ. ಸಮಾನಮನಸ್ಕರು ಜತೆಯಾಗಿ 'ಸಂಜೀವಿನಿ ಸಾವಯವ ಕೃಷಿಕರ ಬಳಗ' ಎನ್ನುವ ಸಂಘಟನೆ ಮಾಡಿ ಕೊಂಡಿದ್ದಾರೆ. 'ಕೃಷಿಯಿಂದ ಸಿಗುವ ಖುಷಿ ಮತ್ತಾವುದರಲ್ಲೂ ಇಲ್ಲ. ಸದ್ಯ ಬೆಳೆಗಳನ್ನು ಸಾರ್ವತ್ರಿಕ ಮಾರುಕಟ್ಟೆಯಲ್ಲಿ ಮಾರುತ್ತಿ ದ್ದೇವೆ. ನಮ್ಮದು ಸಾವಯವ ಕೃಷಿಯಾದ ಕಾರಣ ಸಿರಿಧಾನ್ಯಕ್ಕೆ ಹೊರಗಡೆಯಿಂದ ಬೇಡಿಕೆ ಇದೆ. ಇನ್ಮುಂದೆ ರಾಗಿಯನ್ನು ಮನೆಯಲ್ಲಿಯೇ ಸಂಸ್ಕರಣೆ ಮಾಡಿ, ಮೌಲ್ಯವರ್ಧನೆ ಮಾಡುವ ಉದ್ದೇಶವಿದೆ. ಕೃಷಿಯಲ್ಲೇ ನಮ್ಮ-ನಿಮ್ಮೆಲರ ಭವಿಷ್ಯವಿದೆ' ಎಂಬುದು ಈಶ್ವರ ಗೌಡರ ವಿಶ್ವಾಸ (89710-50999).



12-08-2021 Vv Pg10

For more information visit
University Library Website
Web - uasbagrilibindia.org
E-mail- librarian@uasbangalore.edu.in